# ಕರ್ನಾಟಕ ಸರ್ಕಾರ

ಸಂಖ್ಯೆ:SFS-4/ರಿ.ಬಿ.ವಿ/ರಿಬೀವಿ/ಹಿಂ/ಬೇ/2014-15

ಕೃಷಿ ನಿರ್ದೇಶನಾಲಯ,
ಶೇಷಾದ್ರಿ ರಸ್ತೆ, ಬೆಂಗಳೂರು.
ದಿನಾಂಕ 17-10-2014.

ಗೆ,

ಎಲ್ಲಾ ಜಂಟಿ ಕೃಷಿ ನಿರ್ದೇಶಕರುಗಳು,

ವಿಷಯ:- ಇಲಾಖಾ ಕಾರ್ಯಕ್ರಮಗಳಿಗೆ ಸರ್ಕಾರಿ ಸ್ವಾಮ್ಯದ ಸಂಸ್ಥೆಗಳ ಬಿತ್ತನೆ ಬೀಜಗಳನ್ನು ಆದ್ಯತೆ ಮೇಲೆ ವಿತರಣೆ ಮಾಡುವ ಬಗ್ಗೆ.

ಉಲ್ಲೇಖ:- ವ್ಯ.ನಿ.ಕರಾಬೀನಿ ರವರ ಪತ್ರ ಸಂ. ಕರಾಬೀನಿ/ಎಂ.ಪಿ.ಡಿ.ಸಿ/3815/ 2014-14 ದಿನಾಂಕ: 16.10.2014.

***

ಕೃಷಿ ಇಲಾಖೆಯ ಬೇಡಿಕೆಗೆ ಅನುಸಾರವಾಗಿ ಸರ್ಕಾರಿ ಸ್ವಾಮ್ಯದ ಸಂಸ್ಥೆಗಳು ರಾಜ್ಯದಲ್ಲಿ ಬೀಜೋತ್ಪಾದನೆ ಕೈಗೊಂಡು ವಿವಿಧ ಬೆಳೆಗಳ ಬಿತ್ತನೆ ಬೀಜಗಳನ್ನು ಉತ್ಪಾದಿಸಿ ಇಲಾಖೆಯ ವಿವಿಧ ಕಾರ್ಯಕ್ರಮಗಳಿಗೆ ಪೂರೈಕೆ ಮಾಡುತ್ತಿರುವುದು ತಮಗೆ ತಿಳಿದ ವಿಷಯವಾಗಿರುತ್ತದೆ. ಈ ಹಿನ್ನೆಲೆಯಲ್ಲಿ ಈ ಸಂಸ್ಥೆಗಳು ಉತ್ಪಾದಿಸಿರುವ ಬಿತ್ತನೆ ಬೀಜಗಳನ್ನು ಪ್ರಥಮ ಆದ್ಯತೆ ಮೇಲೆ ವಿತರಿಸಿ ನಂತರ ಖಾಸಗಿ ಸಂಸ್ಥೆಗಳ ಬೀಜಗಳನ್ನು ವಿತರಿಸಲು ಹಲವು ಸುತ್ತೋಲೆಗಳಲ್ಲಿ ಹಾಗೂ ಸಭೆಗಳಲ್ಲಿ ಸ್ಪಷ್ಟವಾಗಿ ತಿಳಿಯಪಡಿಸಿದ್ದರೂ ಸಹ ಆದೇಶಗಳನ್ನು ಪಾಲಿಸದೆ ಖಾಸಗಿ ಸಂಸ್ಥೆಗಳ ಬಿತ್ತನೆ ಬೀಜಗಳ ವಿತರಣೆಗೆ ಆದ್ಯತೆ ನೀಡುತ್ತಿರುವ ವಿಷಯ ಇಲಾಖೆಯ ಗಮನಕ್ಕೆ ಬಂದಿರುತ್ತದೆ.

ಪ್ರಸಕ್ತ ಹಿಂಗಾರು ಹಂಗಾಮಿನಲ್ಲಿಯೂ ಕೂಡ ಸರ್ಕಾರದ ಪ್ರಧಾನ ಕಾರ್ಯದರ್ಶಿ, ಕೃಷಿ ಇಲಾಖೆ, ಇವರು ಅಧ್ಯಕ್ಷರಾಗಿರುವ ಕರ್ನಾಟಕ ರಾಜ್ಯ ಬೀಜ ನಿಗಮವು ಸರಬರಾಜು ಮಾಡಿರುವ ಕಡಲೆ ಬೀಜವನ್ನು ರೈತ ಸಂಪರ್ಕ ಕೇಂದ್ರಗಳಲ್ಲಿ ಆದ್ಯತೆ ಮೇಲೆ ರೈತರಿಗೆ ವಿತರಣೆ ಮಾಡದೆ ಖಾಸಗಿ ಕಂಪನಿಗಳ ಕಡಲೆ ಬೀಜಗಳಿಗೆ ಆದ್ಯತೆ ನೀಡಿ ವಿತರಣೆ ಮಾಡುತ್ತಿರುವುದು ತಿಳಿದುಬಂದಿರುವುದಾಗಿ ವ್ಯವಸ್ಥಾಪಕ ನಿರ್ದೇಶಕರು, ಕರಾಬೀನಿ ಇವರು ಉಲ್ಲೇಖಿತ ಪತ್ರದಲ್ಲಿ ತಿಳಿಸಿರುತ್ತಾರೆ. ಇದರಿಂದ ನಿಗಮದಲ್ಲಿ ಉತ್ಪಾದನೆಯಾಗಿರುವ ಕಡಲೆ ಬಿತ್ತನೆ ಬೀಜಗಳ ದಾಸ್ತಾನಿನಲ್ಲಿ ಸುಮಾರು 35-40 ಸಾವಿರ ಕ್ವಿಂಟಾಲ್‌ಗಳಷ್ಟು ದಾಸ್ತಾನು ಉಳಿಯುವ ಸಂಭವವಿದ್ದು, ಇದರಿಂದ ನಿಗಮಕ್ಕೆ ಗಣನೀಯವಾದ ಆರ್ಥಿಕ ನಷ್ಟ ಉಂಟಾಗುವ ಸಾಧ್ಯತೆ ಇರುವುದಾಗಿ ತಿಳಿಸಿರುತ್ತಾರೆ.

ಈ ಹಿನ್ನೆಲೆಯಲ್ಲಿ ಪ್ರಸಕ್ತ ಹಿಂಗಾರು ಹಂಗಾಮಿನ ಬಿತ್ತನೆ ಬೀಜಗಳನ್ನು ವಿತರಣೆ ಮಾಡುವ ಸಂಬಂಧ ಕೆಳಕಂಡಂತೆ ಸೂಚನೆ ನೀಡಲಾಗಿದೆ.

1. 2014-15ನೇ ಹಿಂಗಾರು / ಬೇಸಿಗೆ ಹಂಗಾಮಿನಲ್ಲಿ ಸಹಾಯಧನದಡಿಯಲ್ಲಿ ರೈತ ಸಂಪರ್ಕ ಕೇಂದ್ರಗಳ ಮೂಲಕ ರೈತರಿಗೆ ವಿತರಣೆ ಮಾಡುವ ಎಲ್ಲಾ ಬೆಳೆ/ತಳಿಗಳ ಬಿತ್ತನೆ ಬೀಜಗಳನ್ನು ಸರ್ಕಾರಿ ಸ್ವಾಮ್ಯದ ಸಂಸ್ಥೆಗಳಾದ ಕ.ರಾ.ಬೀ.ನಿ, ರಾ.ಬೀ.ನಿ ಮತ್ತು ಕೆ.ಓ.ಎಫ್ ಗಳಿಗೆ ಮೊದಲ ಆದ್ಯತೆ ನೀಡಿ, ವಿತರಿಸತಕ್ಕದ್ದು. ನಂತರದ ಬೇಡಿಕೆಗಳಿಗೆ ಖಾಸಗಿ ಸಂಸ್ಥೆಗಳ ಬೀಜಗಳನ್ನು ಪಡೆದು ವಿತರಣೆ ಮಾಡತಕ್ಕದ್ದು.
2. ದೊಡ್ಡ ಪ್ರಮಾಣದ ಪ್ರಾತ್ಯಕ್ಷತೆಗಳಿಗೆ ಮತ್ತು ಕಿರುಬುತ್ತಿ ಚೀಲಗಳಿಗೆ ಸರ್ಕಾರಿ ಸ್ವಾಮ್ಯದ ಸಂಸ್ಥೆಗಳ ಬಿತ್ತನೆ ಬೀಜಗಳನ್ನು ಮಾತ್ರ ಪಡೆದು ಪ್ರಾತ್ಯಕ್ಷತೆಗಳನ್ನು ಏರ್ಪಡಿಸುವುದು. ಒಂದು ವೇಳೆ ಆ ಸಂಸ್ಥೆಗಳಲ್ಲಿ ಪ್ರಾತ್ಯಕ್ಷತೆಗೆ ಬೇಕಾಗುವ ಬೆಳೆ / ತಳಿಗಳ ಬೀಜಗಳು ಲಭ್ಯವಿಲ್ಲದಿದ್ದ ಪಕ್ಷದಲ್ಲಿ ಅವರಿಂದ ಲಿಖಿತವಾಗಿ ವರದಿ ಪಡೆದು ನಂತರವೇ ಇತರೇ ಮೂಲಗಳಿಂದ ಬೀಜಗಳನ್ನು ಪಡೆದು ಬಳಸಿಕೊಳ್ಳತಕ್ಕದ್ದು.
3. ಒಂದು ವೇಳೆ ಸರ್ಕಾರಿ ಸಂಸ್ಥೆಗಳಿಗೆ ಆದ್ಯತೆ ನೀಡದೆ, ಉದ್ದೇಶ ಪೂರ್ವಕವಾಗಿ ಖಾಸಗಿ ಸಂಸ್ಥೆಗಳ ಬೀಜ ವಿತರಣೆಗೆ ಪ್ರೋತ್ಸಾಹಿಸುತ್ತಿರುವುದು ಕೇಂದ್ರ ಕಛೇರಿಯ ಗಮನಕ್ಕೆ ಬಂದಲ್ಲಿ, ಅಂತಹ ಬೀಜ ವಿತರಣೆಗೆ ನೀಡಬೇಕಾದ ಸರ್ಕಾರಿ ವಂತಿಕೆಯನ್ನು ಬಿಡುಗಡೆ ಮಾಡಲಾಗುವುದಿಲ್ಲ ಹಾಗೂ ಅಂತಹ ಜಂಟಿ ಕೃಷಿ ನಿರ್ದೇಶಕರ ಮೇಲೆ ಸೂಕ್ತ ಕ್ರಮ ಕೈಗೊಳ್ಳಲಾಗುವುದು.

ಈ ಬಗ್ಗೆ ತೆಗೆದುಕೊಂಡ ಕ್ರಮವನ್ನು ಕೂಡಲೇ ಕೇಂದ್ರ ಕಛೇರಿಗೆ ವರದಿ ಮಾಡಲು ಸೂಚಿಸಿದೆ.

17.10.14.

ಕೃಷಿ ಆಯುಕ್ತರು

E:\Smitha-E\JDA Letters.doc